ಕರ್ನಾಟಕ ಸರ್ಕಾರ

**ಮಕ್ಕಳ ರಕ್ಷಣಾ ನಿರ್ದೇಶನಾಲಯ**

**ವಿಶ್ವೇಶ್ವರಯ್ಯ ಚಿಕ್ಕಗೋಪುರ, 3ನೇ ಮಹಡಿ ಡಾ॥ ಬಿ.ಆರ್. ಅಂಬೇಡ್ಕರ್ ವೀದಿ**

**ಬೆಂಗಳೂರು–560001 E-mail ID: icps.kar@gmail.com**

ಸಂಖ್ಯೆ:ಮರನಿ/ಆಡಳಿತ/ಎಮ್.ಐ.ಎಸ್–23/2021–22 ದಿನಾಂಕ: –06–2021

**ಆದೇಶ**

**ವಿಷಯ:– ಕೋವಿಡ್–19 ಪ್ರಯುಕ್ತ ಇಲಾಖೆಯೊಂದಿಗೆ ಸೇವೆ ಸಲ್ಲಿಸಲು ಆಸಕ್ತಿ ತೋರುವ ಸ್ವಯಂ ಸೇವಾ ಕಾರ್ಯಕರ್ತರ/ಸ್ವಯಂ ಸೇವಾ ಸಂಸ್ಥೆಗಳ ವಿಷಯಗಳ ನಿರ್ವಹಣೆಗೆ ಕೋಶವನ್ನು ರಚಿಸುವ ಕುರಿತು.**

*******

ಕೋವಿಡ್–19 ಸೋಂಕಿನಿಂದ ಬಾಧಿತ ಹಾಗೂ ಸೋಂಕಿತರಾದ(Affected/Infected) ಹಾಗೂ ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಿಗಾಗಿ ವಿವಿಧ ರೀತಿಯ ಸಹಕಾರ ಸೌಲಭ್ಯ ಒದಗಿಸಲು ಸ್ವಯಂ ಸೇವಾ ಕಾರ್ಯಕರ್ತರಿಂದ/ಸ್ವಯಂ ಸೇವಾ ಸಂಸ್ಥೆಗಳಿಂದ ಅನೇಕ ಅರ್ಜಿಗಳು ಈಗಾಗಲೇ ಇಲಾಖೆಯ ಜಾಲತಾಣದಲ್ಲಿ ಸ್ವೀಕೃತವಾಗಿರುತ್ತವೆ.

ಈ ಹಿನ್ನೆಲೆಯಲ್ಲಿ ಆಸಕ್ತರಿಂದ ಬರುವ ಎಲ್ಲಾ ವೈಯಕ್ತಿಕ ಹಾಗೂ ಸಾಂಸ್ಥಿಕ ಪ್ರಸ್ತಾವನೆಗಳನ್ನು ವ್ಯವಸ್ಥಿತವಾಗಿ ಪರಿಶೀಲಿಸಿ ಅವಶ್ಯ ಕ್ರಮ ಕೈಗೊಳ್ಳಲು ಕೆಳಕಂಡಂತೆ ಸ್ವಯಂ ಸೇವಾ ನಿರ್ವಹಣಾ ಕೋಶವನ್ನು ರಚಿಸಲಾಗಿದೆ.

**"ಮಕ್ಕಳ ರಕ್ಷಣೆಗೆ ಸ್ವಯಂ ಸೇವಾ ನಿರ್ವಹಣಾ ಕೋಶ"**

| ಕೇಂದ್ರ ಕಛೇರಿ | ಸಿವಿಲ್ ಸೊಸೈಟಿ | ಯುನಿಸೆಫ್ |
|---|---|---|
| 1. ಶ್ರೀಮತಿ ನರ್ಮದಾ ಆನಂದ, ನಿವೃತ್ತಿ ಯೋಜನಾ ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು(8310220622)<br>2. ಶ್ರೀಮತಿ. ಗೀತಾರಾಣಿ, ಕಾರ್ಯಕ್ರಮ ವ್ಯವಸ್ಥಾಪಕರು (ಐಇಸಿ ಮತ್ತು ತರಬೇತಿ) (70109750680)<br>3. ಶ್ರೀಮತಿ. ಲಲಿತಮ್ಮ (ನಿವೃತ್ತ ಅಧೀಕ್ಷಕರು ದರ್ಜೆ–2), ವಿಷಯ ನಿರ್ವಾಹಕರು (9591528240)<br>4. ಶ್ರೀಮತಿ. ಸೌಮ್ಯ, ಡಿಇಒ (8867184827) | 1. ಶ್ರೀಮತಿ. ಸೌಮ್ಯ, CRY NGO-(9972933316) | 2. ಸೋನಿ ಕುಟ್ಟಿ ಜಾರ್ಜ್. Child Protection Specialist UNICEF field Officer for Andrapradesh, Telangana, Karnataka.-(8106129210) |

**"ಸ್ವಯಂ ಸೇವಾ ನಿರ್ವಹಣಾ ಕೋಶಕ್ಕೆ ತಾಂತ್ರಿಕ ನೆರವು ಒದಗಿಸುವ ಉಪಕೋಶ"**

1. ಸಿಂಧು ನಾಯಕ, ಸದಸ್ಯರು, KSCCW, ಬೆಂಗಳೂರು(9341705147)
2. ಅರ್ಲಿನ್ ಮನೋಹರನ್ Co-Head Restorative practices Teach, Enfold(9845285095)
3. ಸ್ವಾಗತರಾಹ, Head, Restorative practices Teach, Enfold(9900105511)

**ಕೋಶವು ಕೆಳಕಂಡ ಜವಾಬ್ದಾರಿ/ಕರ್ತವ್ಯಗಳನ್ನು ನಿರ್ವಹಿಸುವುದು:–**

1. ಇಲಾಖೆಯ Website ನಲ್ಲಿ ಕೋವಿಡ್–19ರ ಹಿನ್ನೆಲೆಯಲ್ಲಿ ಮಕ್ಕಳ ರಕ್ಷಣಾ ಕಾರ್ಯಕ್ಕಾಗಿ ಸ್ವಯಂ ಸೇವಾ ಕಾರ್ಯತರ್ಕರಿಂದ/ ಸ್ವಯಂ ಸೇವಾ ಸಂಸ್ಥೆಗಳಿಂದ ಸ್ವೀಕರಿಸಿದ ಅರ್ಜಿಗಳನ್ನು ಆಸಕ್ತಿ ತೋರಿಸಿದ ಅಂಶದ ಆಧಾರದ ಮೇರೆಗೆ ಪರಿಶೀಲನೆ ಮಾಡಿ ವಿಂಗಡಿಸುವುದು.
2. ಸದರಿ ಅರ್ಜಿಗಳಿಗೆ ಸಂಬಂಧಿಸಿದಂತೆ ಪೊಲೀಸ್ ಪರಿಶೀಲನೆ ಕೈಗೊಂಡು ಅರ್ಹರಿಂದ ನಮೂನೆ–1 ಮತ್ತು 2 ರಲ್ಲಿ ಮಾಹಿತಿ ಭರ್ತಿ ಮಾಡಿ ಅರ್ಜಿ ಪಡೆಯುವುದು, ನಂತರ ಸದರಿ ಅರ್ಜಿಗಳನ್ನು ಯೋಜನಾ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಇವರಿಗೆ ಸಲ್ಲಿಸಿ ಕೋವಿಡ್–19 ಕಾರ್ಯಪ್ರವೃತ್ತ ಸ್ವಯಂ ಸೇವಾ ಕಾರ್ಯಕರ್ತರು/ಸ್ವಯಂ ಸೇವಾ ಸಂಸ್ಥೆಗಳು ಎಂದು ಗುರುತಿಸಿರುವ ಆದೇಶ ಮತ್ತು ಗುರುತಿನ ಚೀಟಿ ಪಡೆಯುವುದು.
3. ಯೋಜನಾ ನಿರ್ದೇಶಕರ ಆದೇಶಕ್ಕನುಸಾರವಾಗಿ ಆಯಾ ಅರ್ಹ ಸ್ವಯಂ ಸೇವಾಕಾರ್ಯಕರ್ತರು/ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಇನ್ನಿತರರಿಗೆ ಗುರುತಿನ ಚೀಟಿ ಕೊಡುವ/ತಲುಪಿಸುವ ಬಗ್ಗೆ ಕ್ರಮವಹಿಸುವುದು ಮತ್ತು ಅವರಿಗೆ Orientation ಮಾಡುವುದು.
4. ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳೊಂದಿಗೆ ಸಹ ಸಮನ್ವಯ ಸಾಧಿಸಿ ರಾಜ್ಯಮಟ್ಟದಲ್ಲಿ ಹಾಗೂ ಆಯಾ ಜಿಲ್ಲೆಗಳಲ್ಲಿ ಸ್ವೀಕೃತವಾದ ಸ್ವಯಂ ಸೇವಾ ಕಾರ್ಯಕರ್ತರಿಂದ/ಸ್ವಯಂ ಸೇವಾ ಸಂಸ್ಥೆಗಳಿಂದ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲನೆ ಮಾಡಿ ಸ್ವಯಂ ಸೇವಾ ಕಾರ್ಯಕರ್ತರು/ಸ್ವಯಂ ಸೇವಾ ಸಂಸ್ಥೆಗಳು ಯಾವ ಸೇವೆಗಳನ್ನು ಒದಗಿಸಲು ಸಿದ್ಧರಿರುವರೋ ಆ ಸೇವೆಗಳನ್ನು ಗರಿಷ್ಠ ಮಟ್ಟಕ್ಕೆ ಪರಿಣಾಮಕಾರಿಯಾಗಿ ರಾಜ್ಯಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಬಳಸಿಕೊಳ್ಳಲು ಕ್ರಮಕೈಗೊಳ್ಳುವುದು.
5. ಆಯ್ಕೆಯಾದ ಸ್ವಯಂ ಸೇವಾ ಕಾರ್ಯಕರ್ತರು/ಸ್ವಯಂ ಸೇವಾ ಸಂಸ್ಥೆಗಳ ಕುರಿತಂತೆ ಆಡಳಿತಾತ್ಮಕ ಅಥವಾ ಮಕ್ಕಳ ಹಿತದೃಷ್ಟಿ ಇತ್ಯಾದಿ ಯಾವುದೇ ಕಾರಣಗಳಿಗಾಗಿ ಇವರ ಸೇವೆಯನ್ನು ಅಂತ್ಯಗೊಳಿಸಬೇಕಾದಲ್ಲಿ, ಸದರಿ ಪ್ರಕ್ರಿಯೆಯನ್ನು ಸಹ ಕೋಶವೇ ನಿರ್ವಹಿಸಿ ಯೋಜನಾ ನಿರ್ದೇಶಕರ ಅನುಮೋದನೆಗೆ ಸಲ್ಲಿಸುವುದು.
6. **ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳ ವಿವರಗಳನ್ನು ಸಂಗ್ರಹಿಸಿ ಮಾರ್ಗದರ್ಶನ (Mentorship) ಮತ್ತು ಪ್ರಾಯೋಜಕತ್ವ (Sponsorship) ಅವಶ್ಯವಿರುವ ಮಕ್ಕಳನ್ನು ಅರ್ಹ ಮಾರ್ಗದರ್ಶಕರು ಮತ್ತು ಪ್ರಾಯೋಜಕರಿಗೆ ಮಕ್ಕಳ ಕಲ್ಯಾಣ ಸಮಿತಿಗಳಿಂದ ಆದೇಶ ಪಡೆಯುವ ಮೂಲಕ ಅನುಸಂಧಾನಿಸುವುದು.**
7. ಕೇಂದ್ರ ಕಛೇರಿ, ಮಕ್ಕಳ ಕಲ್ಯಾಣ ಸಮಿತಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು, ಮಕ್ಕಳ ಪಾಲನಾ ಸಂಸ್ಥೆಗಳು ಮತ್ತು ಫಿಟ್ ಫೆಸಿಲಿಟಿಗಳಿಂದ ಆರ್ಥಿಕ ನೆರವು ಹಾಗೂ ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ ಅಗತ್ಯತೆಗಳನ್ನು ಸಂಗ್ರಹಿಸುವುದು ಮತ್ತು ಸದರಿ ಅಗತ್ಯತೆಗಳನ್ನು ವ್ಯಕ್ತಿಗಳಿಂದಾಗಲೀ, ಸ್ವಯಂ ಸೇವಾ ಸಂಸ್ಥೆಗಳಿಂದಾಗಲೀ, ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿಗಳ ನೆರವಿನಿಂದ ಪೂರೈಸಲು ಕ್ರಮವಹಿಸುವುದು.
8. ಕೇಂದ್ರ ಕಛೇರಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಂದ ಆಡಳಿತಾತ್ಮಕ ಅಗತ್ಯತೆಗಳನ್ನು ಸಂಗ್ರಹಿಸಿ, ಸದರಿ ಅಗತ್ಯತೆಗಳನ್ನು ಸೂಕ್ತ ಸ್ವಯಂ ಸೇವಕರು/ಸ್ವಯಂ ಸೇವಾ ಸಂಸ್ಥೆಗಳಿಂದ ಪೂರೈಸಲು ಸಂಪರ್ಕ ಸಾಧಿಸುವ ಬಗ್ಗೆ ಕ್ರಮ ಜರುಗಿಸುವುದು.
9. ಕೇಂದ್ರ ಕಛೇರಿಯಿಂದ, ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಂದ, ಮಕ್ಕಳ ಪಾಲನಾ ಸಂಸ್ಥೆಗಳಿಂದ ಮತ್ತು ಮಕ್ಕಳ ಕಲ್ಯಾಣ ಸಮಿತಿಗಳಿಂದ ಮಕ್ಕಳ ಪಾಲನೆ ಮತ್ತು ರಕ್ಷಣೆಗೆ ಸಂಬಂಧಪಟ್ಟ ಇತರೆ ಯಾವುದೇ ಅಗತ್ಯತೆಗಳ ಮಾಹಿತಿ ಸಂಗ್ರಹಿಸಿ ಸದರಿ ಅಗತ್ಯತೆಗಳನ್ನು ಪೂರೈಸಲು ಆಸಕ್ತಿ ಹೊಂದಿರುವ ಯಾವುದೇ ಸೂಕ್ತ ಸ್ವಯಂ ಸೇವಕರು/ಸ್ವಯಂ ಸೇವಾಸೇವಾ ಸಂಸ್ಥೆಗಳು ಹಾಗೂ ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿಗಳ ಸಂಪರ್ಕ ಸಾಧಿಸಿ ಕ್ರಮ ಜರುಗಿಸುವುದು.

10. ಲಭ್ಯವಿರುವ ಎಲ್ಲಾ ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿಗಳ ಅವಕಾಶಗಳನ್ನು ಅನ್ವೇಷಿಸಿ ಸದರಿ ಅವಕಾಶಗಳನ್ನು ಇಲಾಖೆಗೆ ಬಳಸಿಕೊಳ್ಳಲು ಅವಶ್ಯಕ ಕ್ರಮ ಜರುಗಿಸುವುದು.
11. ಮೇಲಿನ ಎಲ್ಲಾ ಕಾರ್ಯಗಳನ್ನು ಲಗತ್ತಿಸಿದ Standard Operating Procedure ಪ್ರಕಾರ ಕೈಗೊಳ್ಳುವುದು. ಕ್ರಮ ಸಂಖ್ಯೆ(2)ರಲ್ಲಿನ ನಮೂನೆಗಳನ್ನು ಸಹ ಸದರಿ Standard Operating Procedure ಅನುಬಂಧದಲ್ಲಿ ಇರಿಸಲಾಗಿದೆ.

03.06.2021

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

**ಪ್ರತಿಯನ್ನು ಮಾಹಿತಿಗಾಗಿ:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು.
2. ಕರ್ನಾಟಕ ರಾಜ್ಯ ಕೋವಿಡ್-19 ಬಾದಿತ ಮಕ್ಕಳ ನೋಡಲ್ ಅಧಿಕಾರಿಗಳು, ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕ ಆಯುಕ್ತರು, ಬೆಂಗಳೂರು.
3. ಸೋನಿ ಕುಟ್ಟಿ ಜಾರ್ಜ್. Child Protection Specialist UNICEF field Officer for Andrapradesh, Telangana, Karnataka.
4. ಶ್ರೀಮತಿ ನರ್ಮದಾ ಆನಂದ, ನಿವೃತ್ತಿ ಯೋಜನಾ ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು.
5. ಶ್ರೀಮತಿ. ಗೀತಾರಾಣಿ, ಕಾರ್ಯಕ್ರಮ ವ್ಯವಸ್ಥಾಪಕರು(ಐಇಸಿ) ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು.
6. ಶ್ರೀಮತಿ. ಸೌಮ್ಯ, CRY NGO.
7. ಸಿಂಧು ನಾಯಕ, ಸದಸ್ಯರು, KSCCW, ಬೆಂಗಳೂರು.
8. ಅರ್ಲಿನ್ ಮನೋಹರನ್ Co-Head Restorative practices Teach, Enfold.
9. ಸ್ವಾಗತ ರಾಹ, Head, Restorative practices Teach, Enfold.
10. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ.
11. ರಾಜ್ಯದ ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳಿಗೆ.
12. ರಾಜ್ಯದ ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ.
13. ಶಾಖಾ ರಕ್ಷಾ ಕಡತ.
14. ಕಛೇರಿ ಕಡತ.